ಆ) ಬೆಂಗಳೂರು ನಗರ ಪಾಲಿಕೆ ಖಾಸಗಿ ಸ್ವಾಮ್ಯದ ಫಿಲಿಪ್ಸ್ ಲಿಮಿಟೆಡ್‌ನಿಂದ ಬೀದಿ ದಿಪ ಗಳಿಗಾಗಿ ಬಲ್ಬುಗಳು ಮತ್ತಿತರ ವಿದ್ಯುತ್ ಸಾಮಗ್ರಿಗಳನ್ನು ಖರೀದಿಸಿದ ವರದಿ ನಿಜವೇ ?

ಇ) ಸರ್ಕಾರಿ ಸ್ವಾಮ್ಯದ ಮೈಸೂರು ಲ್ಯಾಂಪ್ಸ್‌ನಿಂದ ಸರ್ಕಾರಿ ಸಂಸ್ಥೆಗಳು ನಗರಪಾಲಿಕೆ ಮತ್ತಿತರ ಸಂಸ್ಥೆಗಳು ತಮ್ಮ ಅಗತ್ಯದ ವಿದ್ಯುತ್ ವಸ್ತುಗಳನ್ನು ಖರೀದಿಸಬೇಕೆಂದು ಸರ್ಕಾರವು ಆದೇಶ ನೀಡಿದೆಯೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ).—

ಅ) ಇಲ್ಲ.

ಆ) ನಗರ ಸಭೆಯು ಪ್ರಾಯೋಗಿಕವಾಗಿ ಮೂರು ರಸ್ತೆಗಳಲ್ಲಿ ಮಾತ್ರ ಸೋಡಿಯಂ ವೇಪರ್ ಲ್ಯಾಂಪ್ ಹಾಕಲು ''ಪೈಲಟ್ ಸ್ಕೀಂ'' ಆಧಾರದ ಮೇಲೆ ಫಿಲಿಪ್ಸ್ ಇಂಡಿಯಾ ಕಂಪನಿಗೆ ಕೊಟ್ಟಿರುತ್ತದೆ.

ಇ) ಹೌದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ಉತ್ತರಿಸಬೇಕಾದ ೫೨ನೇ ಪ್ರಶ್ನೆ ಪಟ್ಟಿಯನ್ನು ಸಭೆಯ ಮುಂದೆ ಇಟ್ಟಿದ್ದೇನೆ.

ಅಧ್ಯಕ್ಷರು.—ಸಭೆಯ ಮುಂದೆ ಮಂಡಿಸಲಾಯಿತು.

ಮ್ಯಾಂಚೆಸ್ಟರ್ ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ

೪೦೬೭. **ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).**—ಮಾನ್ಯ ವಾರ್ತಾ ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವಕನ್ನಡಿಗರ ಸಮ್ಮೇಳನಕ್ಕಾಗಿ ರಾಜ್ಯ ಸರ್ಕಾರ ವೆಚ್ಚ ಮಾಡಿದ ಮೊತ್ತ ವೆಷ್ಟು ?

೨. ಈ ಸಮ್ಮೇಳನದಲ್ಲಿ ಭಾಗವಹಿಸಿದ ಕಲಾವಿದರು, ಲೇಖಕರು ಹಾಗೂ ಸಚಿವರ ವಿವರ ಗಳೇನು ?

೩) ಪ್ರಯಾಣ ಭತ್ಯ ಮತ್ತಿತರ ಭತ್ಯೆಗಳಿಗಾಗಿ ಖರ್ಚು ಮಾಡಿದ ಹಣವೆಷ್ಟು ?

೧)	ಕಲಾವಿದರು	ಒಟ್ಟು
	೧. ಲಘು ಸಂಗೀತ ಕಲಾವಿದರು	೨
	೨. ಕ್ಲಾರಿಯೋನೇಟ್ ವಾದ್ಯ ಸಂಗೀತ	೧
	೩. ತಬಲ ಕಲಾವಿದರು	೧
	೪. ಪೀಟಿಲು	೧
	೫. ಸಿತಾರ್	೧
	೬. ಭರತನಾಟ್ಯ ನೃತ್ಯ	೩
	೭. ನಾಟಕ ತಂಡ	೮
	೮. ಯಕ್ಷಗಾನ ಕಲಾವಿದರು	೮
೨)		೩
೩)		೨
		೩೦

೨) ಸಚಿವರು

——

ಮಾನ್ಯ ಮುಖ್ಯಮಂತ್ರಿಗಳು, ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಸಚಿವರು, ಮತ್ತು ಕೈಗಾರಿಕಾ ಸಚಿವರು.

೩) ವಿಶೇಷ ಆಹ್ವಾನಿತ ಪ್ರತಿನಿಧಿಗಳು

——————————

ಖ್ಯಾತ ಲೇಖಕರು–೧, ಖ್ಯಾತ ಕ್ರಿಕೆಟ್ ಪಟು–೧, ಖ್ಯಾತ ಚಲನಚಿತ್ರ ತಾರೆ–೧

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

೧) ರೂ. ೧೫,೨೬,೯೩೩–೦೦.

೨)

೩) ರೂ. ೫,೧೫,೮೨೬–೦೦

ಕರ್ನಾಟಕ ಗೃಹ ಮಂಡಳಿಯು ಗುಲ್ಬರ್ಗ ವಿಭಾಗದಲ್ಲಿ ಬಿಡಿ ಮನೆ ಮತ್ತು ನಿವೇಶನಗಳನ್ನು ವಿತರಣೆ ಮಾಡಿದ ಬಗ್ಗೆ

೨೯೩೨. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಗೃಹ ಮಂಡಳಿ ತನ್ನ ಗುಲ್ಬರ್ಗ ವಿಭಾಗದಲ್ಲಿ ಬಿಡಿ ಮನೆ ಮತ್ತು ಬಿಡಿ ನಿವೇಶನಗಳ ವಿತರಣೆಯನ್ನು ಯಾವ ಯಾವ ಸಾಲಿನಲ್ಲಿ ಮಾಡಲಾಗಿದೆ ?

ಆ) ಬಿಡಿ ಮನೆ ಮತ್ತು ಬಿಡಿ ನಿವೇಶನ ಪಡೆದವರ ಹೆಸರು ಮತ್ತು ವಿಳಾಸಗಳ ವಿವರ ನೀಡುವುದು.

ಇ) ಈ ನಿವೇಶನ ವಿತರಣೆಯನ್ನು ಕರ್ನಾಟಕ ಗೃಹ ಮಂಡಳಿ ನಿಯಮಗಳಿಗನ್ವಯ ಮಾಡಲಾಗಿದೆಯೇ ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಕರ್ನಾಟಕ ಗೃಹ ಮಂಡಳಿಯು ಮನೆ ನಿವೇಶನಗಳನ್ನು ಹಂಚಿಕೆ ನಿಯಮಾವಳಿಗಳ ಪ್ರಕಾರ ೧೯೫೩ ರಿಂದ ಈವರೆಗೆ ಮಾಡಲಾಗಿದೆ.

ಆ) ಬಿಡಿ ಮನೆ ಮತ್ತು ನಿವೇಶನ ಪಡೆದವರ ಹೆಸರುಗಳನ್ನು ಅನುಬಂಧ 'ಅ' ಮತ್ತು 'ಆ' ನಲ್ಲಿ ಕೊಡಲಾಗಿದೆ.

ಇ) ಮಂಡಳಿಯ ನಡುವಳಿ ಸಂಖ್ಯೆ ೮ ದಿನಾಂಕ ೧೮-೨-೧೯೬೮ ರ ಪ್ರಕಾರ ಹಂಚಿಕೆಯನ್ನು ಮಾಡಲಾಗಿದೆ.